INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-7, Issue -3, May--June, 2025
PageNo,01- 12
Peer -Reviewed, Refereed Journal

# ಬಿ IIಬಸವಲಿಂಗಪ್ಪ ಮತ್ತು ಹಿಂದುತ್ವ ವೈಚಾರಿಕ ಸಂಘರ್ಷ– ಒಂದು ವಿಮರ್ಶೆ.

ಚಂದ್ರ.ಎಸ್.[1]

"ನೊಂದವರು ಅಹಿಂಸೆಗೆ ಹತ್ತು ವರುಷ ರಜೆ ನೀಡಿ"

ಕ್ರಾಂತಿಕಾರಿ–ಬಿ II ಬಸವಲಿಂಗಪ್ಪ.



ಅಂದು, 1973ರ ಕಾಲಘಟ್ಟ, ಕರ್ನಾಟಕ ರಾಜ್ಯ ಪೌರಾಡಳಿತ ಮಂತ್ರಿಯಾಗಿದ್ದ ಬಿ IIಬಸವಲಿಂಗಪ್ಪನವರು,ಅದೇ ವರಷದ ಅಕ್ಟೋಬರ್ ತಿಂಗಳಲ್ಲಿ ಶಿವಮೊಗ್ಗದ ನಗರಸಭೆಯ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದರು.ಅಖಿಲ ಭಾರತ ಹಿಂದೂ ಮಹಾಸಭಾದ ಯುವಕರು ಸಚಿವ ಬಸವಲಿಂಗಪ್ಪನವರನ್ನು ಧಿಕ್ಕಾರಿಸುತ್ತಾ' ಹಿಂದೂ ದ್ರೋಹಿ' ಎಂದು ಘೋಷಣೆ ಕೂಗಿದರು. ವ್ಯವಧಾನದಿಂದ ಪ್ರತಿಕ್ರಿಯಿಸಿರುವ ಬಿ IIಬಸವಲಿಂಗಪ್ಪನವರು ತಮ್ಮ ವಿಚಾರವಾದವನ್ನು ಪ್ರಬುದ್ಧವಾಗಿ ಪ್ರತಿಪಾತಿಸಿದ್ದಾರೆ.

'ಅಖಿಲ ಭಾರತ ಹಿಂದೂ ಮಹಾಸಭಾದ' ಉಪಾದ್ಯಕ್ಷ ಭೂಪಾಳಂ ಚಂದ್ರಶೇಖರಯ್ಯನವರ ಮುಂದಾಳತ್ವದ ಕೋಮು ಗುಂಪು ಮತ್ತು ಕ್ರಾಂತಿಕಾರಿ ರಾಜಕೀಯ ಮುತ್ಸದಿ ಬಿ IIಬಸವಲಿಂಗಪ್ಪನವರ ನಡುವೆ ನಡೆದ ವಿಚಾರ ವಾಗ್ವಾದವನ್ನು ಪರಾಮರ್ಶಿಸಿ ನೋಡುವ ಪ್ರಯತ್ನವಿದು.

ಬುದ್ಧ ಗುರುವಿನಿಂದ ವೇಗ ಪಡೆದ 'ವೈಚಾರಿಕ ಕ್ರಾಂತಿ' ಸಾಂಖ್ಯರು, ಲೋಕಾಯುತರು, ಬಸವಾದಿ ಶರಣರು, ಮಹಾತ್ಮ ಪುಲೆಯವರಂತಹ ಮಹಾನ್ ಮಾನವಾತಾವಾದಿಗಳ ಚಿಂತನೆಗಳು ಡಾ IIಬಾಬಾ ಸಾಹೇಬ್ ಅಂಬೇಡ್ಕರ್‌ರವರ ಪರಿಶ್ರಮದ ಸಂವಿಧಾನದ ಮೂಲಕ ಸಾರ್ಥಕ ರೂಪ

1.ಸಂಶೋಧಕರು, ಗ್ರಾಮೀಣಾಭಿವೃದ್ಧಿ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು.

ಪಡೆದವು. ವೈಚಾರಿಕ ಪರಂಪರೆಯನ್ನು ಸಮಾಜ ಪರಿವರ್ತನೆಗೆ ಪ್ರೇರಣೆಯಾಗಿಸಿಕೊಂಡ ಬಿ.ಬಸವಲಿಂಗಪ್ಪನವರು, ಸಹಜವಾಗಿ ನಮ್ಮ ಆದಿಮರ ಎತ್ತಿದ ಪ್ರಶ್ನೆಗಳನ್ನು ಮತ್ತೆ 'ಸವರ್ಣೀಯ ಹಿಂದೂ'ಸಮಾಜದ ಮುಂದಿರಿಸಿದ್ದಾರೆ. ದೇಶದ ಬಹುಸಂಖ್ಯಾತ ದಮನಿತರ ಮೇಲಾದ ಐತಿಹಾಸಿಕ ದೌರ್ಜನ್ಯಗಳ ಮೂಲವನ್ನು ಕೆದಕುವ ಬಸವಲಿಂಗಪ್ಪನವರು; ಬಾಬಾ ಸಾಹೇಬರು ನಿಮ್ನ ವರ್ಗಗಳ ಜನಪ್ರತಿನಿಧಿಗಳಿಗೆ ಹೇಳಿದ್ದ "ಸಂವಿಧಾನ ಪರಿಣಾಮಕಾರಿ ಅನುಷ್ಠಾನಗೊಳಿಸುವ" ಮಾತನ್ನು ಸಾಕಾರಗೊಳಿಸುವ ಪ್ರಾಮಾಣಿಕ ಪ್ರಯತ್ನವನ್ನು ಬದುಕಿನ್ನುದಕ್ಕೂ ನಡೆಸಿ ಸಮಾಜದಲ್ಲಿ ಗುರುತರವಾದ ಬದಲಾವಣೆಗೆ ಕಾರಣರಾಗಿದ್ದಾರೆ.

ಆತ್ಮಗೌರವ ಹೀನತೆಯಿಂದ ಬೆದರಿ ನಿಂತಿರುವ ತುಳಿತಕ್ಕೊಳಗಾದ ವರ್ಗಗಳಲ್ಲಿ ಭರವಸೆ ತುಂಬಿದ ಮಹಾತ್ಮ,ಬಿ ll ಬಸವಲಿಂಗಪ್ಪನವರು ಜನಿಸಿ ಇಂದಿಗೆ (1922–2022) ನೂರು ವರುಷಗಳು ಪೂರೈಸುತ್ತಿವೆ. ಮಲಹೊರುವ ಪದ್ದತಿಯನ್ನು ರದ್ದುಮಾಡಿ ಭಾರತ ದೇಶದ ಮನುಷ್ಯತ್ವಕ್ಕಂಟಿದ ಕಳಂಕವನ್ನು ತೊಳೆದ ಸ್ವಚ್ಚ ಭಾರತದ ಪಿತಾಮಹಾ ಬಿ llಬಸವಲಿಗಪ್ಪನವರ ವಿಚಾರವಾದವನ್ನು ವೈಚಾರಿಕ ನೆಲೆಗಟ್ಟಿನಲ್ಲಿ ಪರಿಶೀಲಿಸಿ ಅವರ ಚಿಂತನೆಗಳಲ್ಲಿರುವ ಜೀವಪರ ತುಡಿತ ಉಂಟು ಮಾಡಿದ ಸಾಮಾಜಿಕ ಪರಿವರ್ತನೆ ಜೊತೆಗೆ ಜಾತಿಮಾನ್ಯ ಸಮಾಜಕ್ಕೆ ಹೊಡ್ಡಿದ ಪ್ರತಿರೋಧಗಳ ವಿಮರ್ಶಿಸಿ ನೋಡುವುದು ಶೋಷಿತರ ಚರಿತ್ರೆ ಕಟ್ಟುವ ನಿಟ್ಟಿನಲ್ಲಿ ಮಹತ್ವಪೂರ್ಣವಾದದು.

**ಮಾನವ ಘನತೆ**

ನಾಗರೀಕ ಜಗತ್ತನ್ನು ನಾಚಿಸುವ ಅಮಾನವೀಯ ಅಭ್ಯಾಸಗಳನ್ನು ರಕ್ತಗತವಾಗಿ ರೂಢಿಸಿಕೊಂಡು ಬಂದಿರುವವರಿಂದ ಮಾನವ ಘನತೆ ತಲೆತಗ್ಗಿಸುವಂತಾಗಿದೆ. ರಾಜಸತ್ತೆಯ ಪ್ರಜಾ ಶೋಷಣೆ,ಉಳಿಗದವರ ವರ್ಗ ದಾಸ್ಯ, ವಸಾಹತುಷಾಹಿ ವಿಕೃತಿ, ಲಿಂಗಭೇದದ ವಾಂಚೆ , ವರ್ಣಭೇದ ವರಸೆ, ಅಂತಸ್ತಿನ ಅಮಲು ಹೀಗೆ ಹಲವಾರು ಅನಾಚಾರಗಳನ್ನು ವಿಶ್ವದಾದ್ಯಂತ ಗುರುತಿಸಬಹುದು. ಅವುಗಳು ಸೃಷ್ಟಿಸಿದ ಸಾಮಾಜಿಕ ಗಂಡಾಂತರಗಳ ಅರಿತ ಆ ದೇಶದ ಜನ ಬದಲಾವಣೆ ಕಡೆಗೆ ಮುಖ ಮಾಡಿರುವ ನಡೆ ಶ್ಲಾಘನೀಯವಾದದ್ದು. ಜಗತ್ತಿನಲ್ಲಿರುವ ಭೇಧನೀತಿಗಳನ್ನು ನಾಚಿ ನೀರಾಗಿಸುವಂತಹ ಕ್ರೌರ್ಯವನ್ನು ಸಾವಿರಾರು ವರುಷಗಳಿಂದ 'ಜಾತಿ–ಅಸ್ಪೃಶ್ಯತೆ' ಹೆಸರಿನಲ್ಲಿ ಜೀವಂತವಾಗಿರಿಸಿಕೊಂಡಿರುವ ಭಾರತದ ಹಿಂದೂ ಸವರ್ಣೀಯರ ಮನೋ ವ್ಯಾಕುಲತೆ ಅತಿಮಾನುಷ ಕ್ರೌರ್ಯವಾಗಿ ಉಳಿದು ಮನಷ್ಯ ಘನತೆಗೆ ಮರ್ಮಾಗಾತ ನೀಡಿದೆ.

ಜನರ ಹಸಿ ಹಸಿ ಮಲವನ್ನು ಒಂದು ನಿರ್ದಿಷ್ಟ ಜನಾಂಗ ತಲೆಯ ಮೇಲೆ ಹೊತ್ತು ವಿಲೇವಾರಿಗೊಳಿಸುವ ಅಮಾನವೀಯ ರೂಢಿಯನ್ನು ಪೋಷಿಸಿಕೊಂಡು ಬಂದ ಸವರ್ಣ ಹಿಂದೂಗಳ ನೈತಿಕತೆಯನ್ನು ಬಸವಲಿಂಗಪ್ಪ ಹೀಗೆ ಪ್ರಶ್ನಿಸುತ್ತಾರೆ,"ನನ್ನನ್ನು 'ಹಿಂದೂ ಮತ ದ್ರೋಹಿ'(1) ಎಂದು ಕೂಗುವವರನ್ನು ಪ್ರಶ್ನಿಸುತ್ತಿದ್ದೇನೆ. ಸಹಸ್ರಾರು ವರ್ಷಗಳಿಂದ ನೂರಕ್ಕೆ ತೊಂಬತ್ತರಷ್ಟಿರುವ ಸಮಾಜದ ದುರ್ಬಲ ವರ್ಗದವರನ್ನು ಈ ಜನ ತುಳಿದು ತಲೆ ಎತ್ತದಂತೆ ಮಾಡಿರುವರಲ್ಲಾ, ಇಂತಹ ಸವರ್ಣ ಹಿಂದೂಗಳು ದ್ರೋಹಿಗಳೇ?ಅಥವಾ ಮಲ ಹೊರುವ ಪದ್ಧತಿಯನ್ನು ರದ್ದು ಮಾಡಿ ಗುಲಾಮಗಿರಿ ತಪ್ಪಿಸಿರುವ ನಾನು ದ್ರೊಹಿಯೇ? ಎಂಬುದನ್ನು ಜನ ವಿಚಾರ ಮಾಡಬೇಕು." ಸಹಸ್ರ ವರುಷಗಳು ನಾವು ಹಿಂದೂ ಸವರ್ಣೀಯರ ಮಲಹೊತ್ತು ತೆಗೆದರಲ್ಲವೇ? ಆ ರೀತಿ ಸೇವೆ ಸಲ್ಲಿಸಲು ಸಿದ್ದರಾಗಿರುವವರು ಮುಂದೆ ಬನ್ನಿರೀ." (1)ಎಂದು ಸವಾಲೆಸೆದಿದ್ದಾರೆ.

ಬಸವಲಿಣಗಪ್ಪನವರ ವಿಚಾರವಾದದೆದುರು ಗಾಂಧೀಜಿಯವರ ಹರಿಜನೋದ್ಧಾರದ ಮಾತುಗಳನ್ನು ಆಡಿರುವ ಭೂಪಾಳಂರವರು " ಹಿಂದೂ ಪವಿತ್ರ ಗ್ರಂಥಗಳಾದ ವೇದ,ಉಪನಿಷತ್, ಭಗವದ್ಗೀತೆ ಇವುಗಳಿಗೆ ಅಸ್ಪೃಶ್ಯತೆಗೆ ಯಾವ ಆಧಾರವೂ ಇಲ್ಲಾ. ಈಗ ರಾಜ್ಯಾಂಗದಲ್ಲಿ ಈ ಅಸ್ಪೃಶ್ಯತೆ ಕಾನೂನು ಬಾಹಿರವಾಗಿರಲು ಹಿಂದೂ ಮತದ ಮೇಲೆ ಆರೋಪಿಸುವುದು ಸರಿಯಲ್ಲ.ಅಲ್ಲದೆ ಹಿಂದೂ ನಗರಗಳಲ್ಲಿ ಮಲವನ್ನು ತಲೆಯ ಮೇಲೆ ಹೊರಬೇಕು ಎನ್ನುವ ನಿಯಮಾವಳಿಯಾಗಲೀ ಕಂಡುಬರುವುದಿಲ್ಲ. ಮಲ ತೊಳೆದು ಶುದ್ದ ಮಾಡುವ ಕಾರ್ಯವನ್ನು ನಾನು ನಿಮ್ಮ ಮನೆಯಲ್ಲೇ ಮಾಡಲು ನಾನು ಸಿದ್ದನಿದ್ದೇನೆ. ಅದು ಪವಿತ್ರವಾದ ತಾಯಿಯ ಸೇವೆ ಎಂದು ಗಾಂಧೀಜಿಯವರು ಅಂದಿದ್ದಾರೆ. ಆಸ್ಪತ್ರೆಯಲ್ಲಿ ದಾದಿಯರು ಸಲ್ಲಿಸುವುದು ಇದೇ ಸೇವೆಯಲ್ಲವೇ?(1) ಎಂದ ಭೂಪಾಳಂ ರವರ ಅಭಿಪ್ರಾಯ ತೀರ ಹಗುರವಾದದ್ದು. ತನ್ನವರ ಅನಾಚಾರ ಸಮರ್ಥನೆಯ ಸ್ವಾರ್ಥಕ್ಕೆ ಅಂತ್ಯಜರ ನೋವಿನ ಬದುಕನ್ನು ತಾತ್ಸಾರವಾಗಿ ಕಂಡಿರು ಅವರು ಆತ್ಮವಂಚನೆ ಮಾಡಿಕೊಂಡಂತೆ ಕಾಣುತ್ತದೆ.

ಹಿಂದೂ ಧರ್ಮಕ್ಕಂಟಿರುವ ಭೀಕರ ಆಚರಣೆಗಳನ್ನು ಎತ್ತಿ ತೋರಿಸಿ, ತಿದ್ದಲೆತ್ನಿಸಿದ ಬಾಬಾ ಸಾಹೇಬ್ ಅಂಬೇಡ್ಕರರನ್ನು "ಹಿಂದೂ ಧರ್ಮ ವಿನಾಶಕ' ಎಂದು ಕರೆದಿದ್ದವರು, ಬಸವಲಿಂಗಪ್ಪನವರನ್ನು ಅದೇ ಮಾತುಗಳಿಂದ ಮೊದಲಿಸಿದ್ದಾರೆ. ಮಲವನ್ನು ತಲೆ ಮೇಲೆ ಹೊರುವ ಉಪದ್ರವಕಾರಿ ನೀತಿಯನ್ನು ರದ್ದುಮಾಡಿ ಧರ್ಮಕ್ಕಂಟಿರುವ ಕೊಳೆಯನ್ನು ತೊಳೆದಿರುವ ಬಿ ಬಸವಲಿಂಗಪ್ಪನವರು ಹಿಂದೂ ದ್ರೋಹಿಯಾಗಲು ಹೇಗೆ ಸಾಧ್ಯ? ತಮ್ಮ ಸುಧಾರಣೆಗೆ ತಾವೇ ಪ್ರಯತ್ನಿಸಿ ಪ್ರಶ್ನಿಸಿದರೇ ಧರ್ಮದ್ರೋಹವೆನ್ನುವ ಮನುವಾದಿಗಳು, ಇದೇ ಕೆಲಸವನ್ನು ಸವರ್ಣೀಯನೋರ್ವ ಕೈಗೆತ್ತಿಕೊಂಡರೆ ಅವನನ್ನು ಮಹಾತ್ಮನೆಂದು ಮೆರೆಸುತ್ತಾರೆ ಇದು ಅವರ ದ್ವಂದ್ವ ನಿಲುವು. ಸಮಾಜ

ಸುಧಾರಣೆ ಎಂಬುದು ಸವರ್ಣೀಯರ ನಾಯಕತ್ವದಲ್ಲಿ ಅಥವಾ ಅವರ ಕೃಪಾಕಟಾಕ್ಷತೆಯ ಮೇಲೆ ನಡೆಯಬೇಕು, ಅಸ್ಪೃಶ್ಯರು ಸ್ವಯಂ ವಿಮೋಚನಾ ಪ್ರಯತ್ನ ಸ್ಪೃಶ್ಯ ಹಿಂದೂಗಳಿಗೆ ಸಹನೀಯವಾದುದಲ್ಲಾ! ಎಂಬುದು ಅವರ ಇರಾದೆ. ಶೋಷಿತ ಜನಾಂಗಗಳ ಪ್ರಾಮಾಣಿಕ ಅಳಲನ್ನು ಕಂಡು ಹೌಹಾರಿ ಹತ್ತಿಕ್ಕುತ್ತಿರುವ ಭೂಪಾಳಂ ಸಂತತಿಗಳ ಮೊಂಡುವಾದ ಸವರ್ಣಭಾರತದ ಕರಾಳ ಮನಸ್ಥಿತಿಯನ್ನು ಅನಾವರಣಗೊಳಿಸಿದೆ.

ಅಮಾನವೀಯ ನಡವಳಿಕೆಯನ್ನು ಪೋಷಿಸಿಕೊಂಡು ಬಂದ ಹಿಂದೂ ಸವರ್ಣೀಯರು ನಿಜವಾದ ಹಿಂದೂ ಧರ್ಮ ದ್ರೋಹಿಗಳು ಎನ್ನಬಹುದು, ಉಪನಿಷತ್ತು, ಭಗವದ್ಗೀತೆಗಳು ಅಸ್ಪೃಶ್ಯತೆಯ ಆಚರಣೆಯ ಉಲ್ಲೇಖ ವಿಲ್ಲವಾದರೂ ಸಹ ವೇಧಗಳಲ್ಲಿ ಸೃಷ್ಟಿಯಾದ ವರ್ಣ ವ್ಯವಸ್ಥೆಯು ಸ್ಮೃತಿಗಳ ಮೂಲಕ ಜಾತಿಗಳಾಗಿ ಬೆಳೆದು ಮುಚ್ಚಿದ ಬಾಗಿಲಿನ ಸಾಮಾಜಿಕ ಅನಿಷ್ಟಗಳ ಬೆಳವಣಿಗೆಗೆ ಭೂಮಿಕೆಯನ್ನು ಹದಮಾಡಿಕೊಟ್ಟಿರುವ ವಾದವನ್ನು ಹಿಂದು ಸಮಾಜ ತಳ್ಳಿಹಾಕಲಾಗದು.(2)

ಸ್ವಸವರ್ಣೀಯರ ಸಂವಿಧಾನ ವಿರೋಧಿ ಶ್ರೇಷ್ಟತ್ವದ ವ್ಯಸನ ಅಸ್ಪೃಶ್ಯತೆಯನ್ನು ಅನಾಚಾರವನ್ನು ಎಗ್ಗಿಲ್ಲದೆ ನಡೆಸುತ್ತಿರುವುದನ್ನು "ರಾಷ್ಟ್ರೀಯ ಅಪರಾದ ಪ್ರಕರಣಗಳ ಅಂಕಿ ಅಂಶಗಳು ಸಾಕ್ಷೀಕರಿಸುತ್ತವೆ. ಅಂತ್ಯಜರ ಆತ್ಮಗೌರವಹೀನ ಬದುಕನ್ನು ಸಮಾಜದೆದುರು ತೆರೆದಿಡಲು ಪ್ರಯತ್ನಿಸಿರುವ ಬಸವಲಿಂಗಪ್ಪನವರು ಹಿಂದುತ್ವವಾದಿಗಳ ಬೂಸಾ ಸುಧಾರಣಾ ನಾಟಕಗಳನ್ನು ಪರಿಣಾಮಕಾರಿಯಾಗಿ ಬಯಲು ಮಾಡಿದ್ದಾರೆ. ಜಾತಿನೀತಿಯನ್ನು ತೊಲಗಿಸಿ ನಿಮ್ನವರ್ಗಗಳ ಸಾಮಾಜಿಕ ವಿಮೋಚನೆಯ ತವಕದಲ್ಲಿರುವ ಬಸವಲಿಂಗಪ್ಪನವರು ಮನಷ್ಯತ್ವದ ಜವಾಬ್ದಾರಿಯನ್ನು ಸವರ್ಣೀಯರು ಮರೆಯಬಾರದೆಂಬ ಒತ್ತಾಯ ಮಾಡಿದ್ದಾರೆ.

'ಅಸ್ಪೃಶ್ಯತೆಯ ಭೀಕರತೆಯನ್ನು ಅಸ್ಪೃಶ್ಯನೋರ್ವನ ಮನೆ ಮಲ ಶುದ್ದೀಕರಿಸಿದರೆ ಸರಿದೂಗಿಸಿ ಪರಿಹರಿಸಬಹುದು' ಎಂಬ ಪೊಳ್ಳು ನಿರ್ಧಾರಕ್ಕೆ ಬರುವ "ಭೂಪಾಳಂ" ಪರಿವಾರಕ್ಕೆ ಅಂಬೇಡ್ಕರ್ವಾದಿ ಆಯಾಮದಲ್ಲಿ ಸಾಮಾಜಿಕ ಚಿಕಿತ್ಸೆ ನೀಡುವ ಪ್ರಯತ್ನವನ್ನು ಬಸವಲಿಂಗಪ್ಪ ಅಂದು ನಡೆಸಿದ್ದಾರೆ ಎನಿಸುತ್ತದೆ. ನೊಂದ ವರ್ಗಗಳ ಅಳಲನ್ನು ಊಹಿಸಿಕೊಂಡೇ ಉನ್ಮಾದಿತರಾಗಿ "ನಾವು ಮಲ ಶುದ್ದೀಕರಣ ಮಾಡುವೆವು ಅದು ಪವಿತ್ರ ತಾಯಿ ಕೆಲಸ" ಎನ್ನುತ್ತಿರುವ ಹಿಂದುತ್ವವಾದಿಗಳು ಆ ಮೂಲಕ ಮಲಹೊರುವ ಕಾರ್ಯವನ್ನು ಅಸ್ಪೃಶ್ಯರು ಮುಂದುವರಿಸಬೇಕು ಎಂಬ ಓತ್ತಾಯವನ್ನು ಹೇರುತ್ತಿರುವಂತೆ ಕಾಣುತ್ತದೆ. ಮಲ ಶುದ್ದೀಕರಣದ ಕೆಲಸ ನಾನು ಮಾಡುತ್ತೇನೆಂದು ಗಾಂಧೀಜಿಯವರನ್ನು ಆದರ್ಶವೆನ್ನುವ ಸವರ್ಣ ಹಿಂದೂಗಳು ನಾವು ಮಲ ಶುದ್ದೀಕರಿಸುತ್ತೇವೆ ಎನ್ನುವ ಜಳ್ಳು ಮಾತುಗಳಿಗೆ ಇಂದಿಗೆ 50

ವರುಷಗಳು ಉರುಳುತ್ತಿವೆ ; ಒಬ್ಬ ಸವರ್ಣೀಯ ತನ್ನ ತಲೆಯ ಮೇಲೆ ಹೊತ್ತು ಸಾಗಲು ಸಿದ್ದ ಎಂದ ಮಾತನ್ನು ಇಂದಿಗೂ ಕ್ರಿಯೆಗಿಳಿಸಲಿಲ್ಲ. ಆ ಮೂಲಕ ಮಲಹೊರುವ ಪವಿತ್ರ ತಾಯಿಕಾರ್ಯ ಮಾಡದ ವರ್ಣಶ್ರೇಷ್ಠರು ಬಸವಲಿಂಗಪ್ಪನವರ ಸವಾಲಿನೆದುರು ಸೋತಿರುವುದನ್ನು ಹೆಮ್ಮೆಯಿಂದ ದಾಖಲಿಸಬಹುದು.

**ವೈಚಾರಿಕತೆ**

ಸಂಪ್ರದಾಯವಾದಿ ಪಟ್ಟಭದ್ರ ವ್ಯವಸ್ಥೆಗೆ ವೈಚಾರಿಕವಾದ ಪ್ರಶ್ನೆಗಳು ಸಮಸ್ಯೆಯಾಗಿ ಕಾಣುತ್ತವೆ. ಜನರನ್ನು ಕುರಿಮಂದೆ ಮಾಡಿರುವ ರಾಜಕಾರಣಿಗೂ ಪ್ರಶ್ನಿಸುವವರು ಶತ್ರುಗಳಂತೆ ಕಾಣುತ್ತಾರೆ. ಹರಿಜನ ಕೇರಿ ಸುತ್ತಾಡಿ ಮತ ಮಂದಿರಗಳಿಂದ ಅವರನ್ನು ದೂರ ಇರಿಸಿರುವ ಧಾರ್ಮಿಕ ಗುರುಗಳಿಗೂ ಪ್ರಶ್ನಿಸುವವವರು ನುಂಗಲಾರದ ತುತ್ತು, 'ಜಾತಿ ಭೇಧವಿಲ್ಲ' ಎಂದು ಸಾರ್ವಜನಿಕವಾಗಿ ಸಾರಿ ಗುಟ್ಟಾಗಿ ಕಟ್ಟುನಿಟ್ಟಿನ ನಿಯಮ ಪಾಲಿಸುವ ಮಹನೀಯರಿಗೂ ಪ್ರಶ್ನಿಸುವವರು ಬಿಸಿ ತುಪ್ಪವೇ ಆಗಿದ್ದಾರೆ. ಪ್ರಜ್ಞಾಹೀನರಂತಿರುವ ವರ್ತಿಸಿರುವ ಮನುವಾದಿಗಳಿಗೆ ಬಸವಲಿಂಗಪ್ಪ ಒಬ್ಬ ವೈಚಾರಿಕ ಸಂತನಂತೆ ಚಿಕಿತ್ಸೆ ನೀಡಿದ್ದಾರೆ.

ವೈಚಾರಿಕ ಪ್ರಶ್ನೆಯನ್ನು ಹಿಂದೂ ಸಮಾಜದ ಎದೆಗಾರಿಕೆಯಿಂದ ಮುಂದಿಡುವ ಬಸವಲಿಂಗಪ್ಪ ನವರು"ನಾನು ದೇವರ ಪಟಗಳನ್ನು ಗಟಾರಕ್ಕೆ ಎಸೆಯಿರಿ ಎಂದು ಹೇಳಿದೆನೆಂದು ಹಲವಾರು ಪತ್ರಿಕೆಗಳು ವ್ಯಾಖ್ಯಾನ ಮಾಡಿದವು. ನಾನು ಹೇಳಿದೆ ಈ ದೇವರು ಪೂಜೆ ಸಾಕು, ಈ ಪಟಗಳಲ್ಲಿ ದೇವರಿದ್ದಾನೆಯೇ?ಅವನು ಯಾವಾಗ ಫೋಟೋ ತೆಗೆಸಿಕೊಂಡಿದ್ದನ್ನು. ಹತ್ತು ವರುಷ ಇವುಗಳಿಗೆ ರಜಾ ನೀಡಿ ಅಟ್ಟದ ಮೇಲಿಡಿ ಅಲ್ಲಿ ಸ್ಥಳದ ಕೊರತೆಯಾದರೇ ಚರಂಡಿಗೆ ಹಾಕಿ ಅದನ್ನು ಪುರಸಭೆಯವರು ಓಯ್ಯುತ್ತಾರೆ. ಎಂದರೇ ವಿನಹ ಗಟಾರಕ್ಕೆ ಎಸೆಯಿರಿ ಎಂದೇಳಲಿಲ್ಲ. ಅವು ದೇವರ ಫೊಟೋಗಳೇ? ಯಾರು ಹೇಳುತ್ತಾರೆ? ಯಾವುದು ಹಿಂದೂ ಧರ್ಮ?ಎಲ್ಲಿದೆ?"(1) ಎಂದು ಹಿಂದುತ್ವವಾದಿಗಳಿಗೆ ಪ್ರಶ್ನೆಗಳ ಪ್ರಹಾರ ನಡೆಸಿದ್ದಾರೆ.

ಬಸವಲಿಂಗಪ್ಪನವರ ವಾದಕ್ಕೆ ಪ್ರಶ್ನೆಮಾಡುವವರು ಧರ್ಮಕ್ಕಿಂತ ಅತೀತರಲ್ಲಾ ಎನ್ನುವ ಧೋರಣೆಯಲ್ಲಿ ಮಾತನಾಡುವ ಭೂಪಾಳಂ ಪರಿವಾರ"ಹಿಂದೂ ದೇವರ ಮೂರ್ತಿಗಳು ದೇವರ ಪಟಗಳಲ್ಲಿ ದೇವರ ಪ್ರತೀಕ. ಸರ್ವ ಶಕ್ತನ ಪ್ರಾರ್ಥನೆಗೆ ಸಹಾಯಕ. ಇವುಗಳ ವಿಷಯವಾಗಿ ಲಘುವಾಗಿ ಮಾತನಾಡಬೇಡಿ.ಅವು ದೇವರ ಫೋಟೋಗಳೇ! ಈ ಬಗ್ಗೆ ನಾವು ನಂಬಿಕೆ ಇಟ್ಟುಕೊಂಡಿದ್ದೇವೆ. ಪರಮಹಂಸರ ಮತ್ತು ವಿವೇಕಾನಂದರ ಹಿರಿಯ ವಾಕ್ಯಗಳಿಂದ ನಾವು ಮೂರ್ತಿ ಪೂಜೆಯನ್ನು

ಸಮರ್ತನೆ ಮಾಡುತ್ತೇವೆ. ನೀವು ಈಗ ಅನಾವರಣ ಮಾಡಿದ ಅಂಬೇಡ್ಕರ್ ಪಟದಲ್ಲಿ ಜೀವವಿದೆಯೇ?ಅದಕ್ಕೆ ಯಾವ ಹಿನ್ನಲೆಯಲ್ಲಿ ಕೈ ಮುಗಿದಿರಿ?ಇದು ನಿಜವಾಗಿಯೂ ಅವರ ಭಾವಚಿತ್ರವೇ?ಇದಕ್ಕೆ ಮಾನ್ಯತೆ ಕೊಡುವುದರಿಂದ ಏನು ಪ್ರಯೋಜನ? 'ಹಿಂದುಹಿಸಂ' (ಪುಸ್ತಕ ತೋರಿಸುತ್ತಾ) ಇಲ್ಲಿದೆ, ಇದು ಯುಗಾಂತರದಿಂದ ನಡೆದು ಬಂದ ಹಿಂದೂ ಧರ್ಮ ವೇದಗಳ ಕಾಲದಿಂದ ನೆಹರೂರವರ ಕಾಲದ ವರೆಗೂ ಹಿಂದೂ ಧರ್ಮ ನಡೆದು ಬಂದ ದಾರಿಯನ್ನು ವಿವರಿಸಲಾಗಿದೆ."(1) ಎನ್ನುತ್ತಾ ತಮ್ಮ ಅಪ್ರಬುದ್ಧ ವಾದವನ್ನು ಮುಂದುವರಿಸಿದ್ದಾರೆ.

ಪ್ರಜಾತಂತ್ರದಲ್ಲಿ ಅಭಿವ್ಯಕ್ತಿಯನ್ನು ಬಳಸಿಕೊಂಡು ಪಟ್ಟಭದ್ರ ಹಿತಾಸಕ್ತಿಗಳನ್ನು ದಿಟ್ಟತನಿಂದ ಪ್ರಶ್ನೆಗಳು ಸಮಾಜ ಅಂತಃಸತ್ವವನ್ನು ಕಲಕುತ್ತವೆ. ನಿರ್ದಿಷ್ಟ ಆಚಾರಗಳಿಂದ ಒಳ್ಳೆಯದಾಗುತ್ತದೆ ಎನ್ನುವ ನಂಬಿಕೆ ಅವುಗಳನ್ನು ಪ್ರಶ್ನಿಸದಂತೆ ಮಾಡುತ್ತದೆ. ಇವುಗಳಿಂದ ವಂಚನೆಗೊಳಪಟ್ಟವರ ಪ್ರಶ್ನೇಗಳು ಉಳ್ಳವರ ಪಾಲಿಗೆ ಹದ್ದು ಮೀರಿದ ವರ್ತನೆಯಂತೆ ತೋರುತ್ತವೆ. ಪ್ರತಿವಾದ ಮಂಡಿಸಿರುವ ಮನುವಾದಿಗಳು ದಲಿತ ಸಮುದಾಯದ ಬದುಕಿನ ತಲ್ಲಣಗಳು ಅಸಹಜತೆಯನ್ನು ಸಹಜವೆಂಬ ನಿರ್ಧಾರಕ್ಕೆ ಬಂದು ನಿರ್ಲಕ್ಷತೆಯಿಂದ ಉತ್ತರಿಸಿದ್ದಾರೆ. ಧಾರ್ಮಿಕ ಭಾವನೆಯ ಮುಂದಿರಿಸಿಕೊಂಡು ಹಿತಾಸಕ್ತಿ ಉಳಿಸಕೊಳ್ಳಲು ಹವಣಿಸುತ್ತಿರು ಸವರ್ಣ ಹಿಂದೂಗಳ ವಾದ ಉದ್ದೇಶಪೂರ್ವಕ ಹುನ್ನಾರವೇ ಹೊರತು ತಿಳಿಯದೇ ಮಾಡುತ್ತಿರುವ ಪ್ರಮಾದ ಎನ್ನಲು ಸಾಧ್ಯವಿಲ್ಲ.

ಅಸ್ಪ್ರಶ್ಯತೆಯ ಕರಾಳತೆಯ ಅನುಭವವಿರು ವ್ಯಕ್ತಿಯೋರ್ವ ಒಬ್ಬ ಜನಪ್ರತಿನಿಧಿಯಾಗಿ ತನ್ನ ಜನಾಂಗಗಳು ಅನುಭವಿಸುತ್ತಿರುವ ನೋವನ್ನು ಅಭಿವ್ಯಕ್ತಪಡಿಸುತ್ತಾ, ಅಂತಹ ಹೀನ ಸ್ಥಿತಿಗೆ ಕಾರಣವಾದ ಹಿಂದೂ ಧರ್ಮದ ದೇವರ ಅಸ್ಥಿತ್ವದ ಕುರಿತು ಸಹಜವಾದ ವೈಚಾರಿಕ ಪ್ರಶ್ನೆಯನ್ನು ಬಸವಲಿಂಗಪ್ಪ ಎತ್ತಿದ್ದಾರೆ. ಭಕ್ತಿ, ಪೂಜೆಗಳು ಶ್ರಮಿಕ ವರ್ಗವನ್ನು ಆರ್ಥಿಕವಾಗಿ ವಂಚಿಸುತ್ತಿರುವ ಅಂಶವನ್ನು ಬಯಲಿಗೆಳೆಯುವ ಬಸವಲಿಂಗಪ್ಪನವರ ಪ್ರಯತ್ನ ರೋಚಕವಾದದ್ದು. ದೇವರು, ಧರ್ಮ, ಆಚರಣೆಯಗಳನ್ನು ಅಲ್ಲಗಳೆಯುವ ವಾದ ಸರಣಿಯ ಮೂಲಕ ಬಸಲಿಂಗಪ್ಪನವರು ಸಾಮಾಜಿಕ ಪರಿವರ್ತನೆಯ ಕಹಳೆ ಮೊಳಗಿಸಿದ್ದಾರೆ. ಭೂಪಾಳಂ ಪಾಳಯದ ಪ್ರತಿಕ್ರಿಯೆಯಲ್ಲಿ ಹಿಂದೂ ಕಟ್ಟಳೆ ಸುಳಿಯಲ್ಲಿರುವ ಅಂತ್ಯಜನೊರ್ವ, ಧರ್ಮ,ದೇವರ ಅಸ್ಥಿತ್ವವನ್ನು ಪ್ರಶ್ನಿಸುವುದು ಅಪರಾದವೆಂಬ ನಿರ್ಧಾರಕ್ಕೆ ಬಂದಂತಿದೆ. ಧರ್ಮ ಶ್ರೇಷ್ಠರೇ ಸೃಷ್ಟಿಸಿರುವ ಜಡ ಚಿತ್ರಗಳಿಗೆ ಧಾರ್ಮಿಕ ಲೇಪ ಹಚ್ಚಿ ಅವು ಪ್ರಶ್ನಾತೀತವಾದುವು; ಎಂಬ ವಾದ ಮಂಡಿಸುವ ಪರಿವಾರ ಸಮಾಜದ ವೈಚಾರಿಕ ಸತ್ವವನ್ನು ಅಂಕೆಯಲ್ಲಿಡುವ ಧೋರಣೆ ಧರ್ಮಾಂದರದ್ದು. ಧರ್ಮದ ಪರ ವಕ್ತಾರಿಕೆಗೆ ನಿಂತು ವಿಚಾರಶೀಲ

ಚಿಂತನೆಯನ್ನು ಉದ್ದಟತನವೆಂದು ದರ್ಪ ತೋರಿರುವ ಭೂಪಾಳಂ ಪರಿವಾರ ದಮನಿತರ ಅಭಿವ್ಯಕ್ತಿಯ ಹಕ್ಕನ್ನು ಅಲ್ಲಗಳೆಯುತ್ತಿದ್ದಾರೆ.

ಬಸವಲಿಂಗಪ್ಪನವರ ಮಾತುಗಳಲ್ಲಿ ವ್ಯಕ್ತವಾಗಿರುವ ಹಿಂದೂ ಧರ್ಮ ವಿರೋಧಿ ಚಿಂತನೆಗಳಿಗೆ, ಅವರ ಮಾತೃ ಜನಾಂಗಗಳು ಅನುಭವಿಸಿರುವ ಕರಾತೆಯು ಕಾರಣ ಎಂಬುದನ್ನು ಭೂಪಾಳಂ ಪರಿವಾರ ನೆನಪಿಲಿಟ್ಟುಬೇಕಿತ್ತು. ದೇಶದ ಅಕ್ಷರ ವಂಚಿತ ಜನವರ್ಗವನ್ನು ತನ್ನ ಕಪಿಮುಷ್ಟಿಯಲ್ಲಿರಿಸಿಕೊಂಡು ಕನಿಷ್ಟ ಆತ್ಮಗೌರವವನ್ನು ನೀಡದೆ ವಂಚಿಸಿರುವ ಹುನ್ನಾರಗಳ ಅರಿವಿರುವ ಬಸವಲಿಂಗಪ್ಪನವರು "ಸಮ ಸಮಾಜ ಸಾಕಾರವಾಗಲು ನಿಮ್ಮ ಹಳೆ ಅಸಮಾನತೆ ಭೋದಿಸುವ ಗ್ರಂಥಗಳನ್ನು ಶೈತ್ಯಾಗಾರದಲಿಡಿ" ಎಂಬ ಮಾತುಗಳಲ್ಲಿ, ವಂಚಿತರಿಗೆ ಸ್ವಾಭಿಮಾನದ ಬದುಕ ರೂಪಿಸುವ ತುಡಿತವಲ್ಲದೆ ಹಿಂದೂ ದ್ವೇಷವಿಲ್ಲಾ, ಎಂಬ ವಾಸ್ತವವನ್ನು ಹಿಂದುತ್ವವಾದಿಗಳು ಒಪ್ಪಬೇಲೇಬೇಕಿದೆ.

**ವಾಸ್ತವ**

ಭೂಪಳಂರವರ ವಾದಗಳಿಗೆ ಆಧಾರಗಳ ಅವಶ್ಯವಿಲ್ಲ;ಅವರಿರಿಯರ ಊಹೆಯಿಂದ ಮೂಡಿದ ಕಟ್ಟು ಕತೆಗಳೇ ಪಾರುಪತ್ಯ ಸಾಧಿಸಬೇಕೆನ್ನುವ ಹುಂಬತನ ಅವರ ಪರಿವಾರದ್ದು. ಸತ್ಯಾಸತ್ಯತೆಗಳ ಪರಾಮರ್ಶಿಸುವ ಅಥವಾ ಪ್ರಶ್ನಿಸುವ ಯಾರನ್ನೂ ಅವರು ಸಹಿಸುವುದಿಲ್ಲ ವಿಶೇಷವಾಗಿ ದಲಿತರಂತೂ ಸೊಲ್ಲೆತ್ತುವಂತಿಲ್ಲ ಹೌಹಾರುತ್ತಾರೆ. ವಾಸ್ತವಗಳ ಮರೆಮಾಚುವ ಇವರ ನಂಬಿಕೆ, ಆಚರಣೆಗಳು ಲಾಭ ತಂದದ್ದಾರಿಗೆ?ಘೋರ ಹಾನಿ ಯಾರಿಗೆ? ಎಂದು ಸಮಾಜ ಪರಾಮರ್ಶಿಸಿ ನೋಡಬೇಕು.

ದೇವರ ಪಟಗಳ ರೂಪ ಅಸ್ಮಿತೆ ಕುರಿತ ಬಸವಲಿಂಗಪ್ಪನವರ ಪ್ರಶ್ನಗೆ, ವೈಜ್ಞಾನಿಕ ಉತ್ತರ ನೀಡಲಾರದ ಭೂಪಾಳಂರವರು "ನಾವು ನೀವು ಹೇಳುವುದನ್ನು ಅತಿ ಗೌರವದಿಂದ ನಂಬುತ್ತೇನೆ. ಹಾಗೆಯೇ ಭಗವಂತನನ್ನು ಸಾಕ್ಷಾತ್ಕಾರ ಮಾಡಿಕೊಂಡ ಮಹನೀಯರ ವಾಕ್ಯಗಳನ್ನು ಜನರು ನಂಬುತ್ತಾರೆ. ನಾವು ನಿಮ್ಮ ನಂಬಿಕೆಗಳನ್ನು ಗೌರವಿಸುವಂತೆ ತಾವೂ ಸಹ ನಮ್ಮ ನಂಬಿಕೆಗಳನ್ನು ಗೌರವಿಸಲೇಬೇಕು ಇಲ್ಲವಾದರೇ ನಿಮ್ಮ ಪಟವೂ ನಾಳೆಯ ದಿನ ಚರಂಡಿಗೆ ಬೀಳುವ ದುರ್ಗತಿ ಬರಬಹುದು." ಎನ್ನುತ್ತಾ ತಮ್ಮ ಪಾಳೇಗಾರಿಕೆ ದಾಟಿಯ ಅಸಂಬದ್ದವಾದ ಮುಂದುವರಿಸಿದ್ದಾರೆ.

ಅನಾರೋಗ್ಯಕರ ಚರ್ಚೆಗೆ ಆಸ್ಪದ ನೀಡದಿರುವ ಮತೀಯ ಶಕ್ತಿಗಳಿಂದ ಹಿಂದೂ ಧರ್ಮ ಪ್ರತಿಪಾದಿಸುವ ಜನರ ನೈತಿಕತೆ ಹೇಗೆ ಅಧಃಪತನದ ಹೊಂದಿವೆ ಎಂದು ಹೇಳುತ್ತಿವೆ. ಬಾಬಾ ಸಾಹೇಬರ ಭಾವಚಿತ್ರದ ಅಸ್ಮಿತೆಯ ಸಿಂಧುತ್ವದ ಪ್ರಶ್ನೆಯನ್ನು ಮುಂಡಿಟ್ಟು ; ಕಾಲ್ಪನಿಕ ಪಟಗಳ ಸಿಂಧುತ್ವಕ್ಕೆ ಓತ್ತಾಯಿಸುವ ವಾಮವಾದ ಹೀನಾಯಮಾನವಾಗಿದೆ. ಪರಮಹಂಸ ಮತ್ತು ವಿವೇಕರನ್ನು

ಉಲ್ಲೇಖಿಸಿ ಮೂರ್ತಿ ಪೂಜೆ ಸಮರ್ಥನೆಗೆ ನಿಂತಿರುವ ಹಿಂದುತ್ವವಾದಿಗಳ ದೂರ್ತ ನಿಲುವನ್ನು ಸ್ವತಃ ವಿವೇಕರೇ ಒಪ್ಪಲಾರರು. ಹಿಂದೂ ಧರ್ಮದ ಇತರೆ ಆಚರಣೆಗಳ ಕುರಿತ ವಿವೇಕರನ್ನು ಅಭಿಪ್ರಾಯಗಳ ಮರೆಸಿ, 'ಮೂರ್ತಿ ಪೂಜೆಯ ಸಮರ್ಥನೆ' ಮಾತ್ರಕ್ಕೆ ಅವರನ್ನು ಸೀಮಿತಗೊಳಿಸುವುದು ಮನುವಾದಿಗಳ ಸಣ್ಣತನವಾಗಿ ತೋರಿತ್ತದೆ. ಪಂಚನಾಮೆಗೊಳಪಟ್ಟು ಪ್ರಮಾಣಿಸಿಕೊಂಡಿರುವ ಚರಿತ್ರೆಯಸತ್ಯವಾಗಿದೆ.ಕೆಲವೇ ಜನವರ್ಗಗಳ ಹಿತಾಸಕ್ತಿಯನ್ನು ಗುರಿಯಾಗಿಸಿಕೊಂಡ ಸ್ವಹಿತ ಕೇಂದ್ರಿತ ಗ್ರಂಥಗಳನ್ನು ಅಂತಿಮ ಆಧಾರ ಮತ್ತು ನಡೆದು ಬಂದ ದಾರಿ ಎನ್ನುವ ವಾದ ಅಪ್ರಸ್ತುತವಾಗುತ್ತದೆ. ಅಂಬೇಡ್ಕರ್ವಾದಿ ಚಿಂತನೆಗಳಿಂದ ದಿಟ್ಟ ವಾದ ಮಂಡಿಸಿದ ಬಸವಲಿಂಪ್ಪನವರು ಹಿಂದೂ ದೇವರುಗಳೆಂಬ ಪಟಗಳ ಕುರಿತಾದ ಜಿಘ್ನಾಸೆಗೆ ವಾಸ್ತವ ಪ್ರಜ್ಞೆಯೊಂದಿಗೆ ಸ್ಪಷ್ಟತೆ ನೀಡಿ ಬದಲಾವಣೆಗೆ ಕರೆ ನೀಡಿದ್ದಾರೆ.

**ಹೊಸ ಕ್ರಾಂತಿ ಮತ್ತು ಹಳೆ ಬೇರು:**

ಮಾನವನ ಉಗಮದ ವಿಕಾಸದ ಆದಿ ಹಲವಾರು ಹಂತಗಳ ದಾಟಿ ಪಕ್ವತೆ ಪಡೆದಿದೆ. ಅರಗಿಸಿಕೊಂಡ ಪಕ್ವತೆಯನ್ನು ತನ್ನಂತಿರುವ ಇತರೇ ಜನಾಂಗಗಳನ್ನು ವಂಚಿಸಲು ಬಳಸುವ ಕೆಲವು ಜನವರ್ಗಗಳು ಕೆಲವರ ಹಿತಾಸಕ್ತಿಗಾಗಿ ಸಂಘಟಿತ ಸಿದ್ಧಾಂತಗಳನ್ನು ರಚಿಸಿ ಅವುಗಳನ್ನು ಧರ್ಮ ನಂಬಿಕೆಗಳ ಹೆಸರಲ್ಲಿ ಸಾಮಾಜೀಕರಣಗೊಳಿಸಿದ ಪರಿಣಾಮವಾಗಿ ಸಮಾಜದಲ್ಲಿ ವಂಚನೆಗಳು ಅವ್ಯಾತವಾಗಿ ರೂಡಿಯಲ್ಲಿವೆ. ಇಂತಹ ಅನಾಚಾರಗಳ ಹೇರಿಕೆಯ ವಿರುದ್ಧ ನೊಂದವರ ಪ್ರತಿನಿಧಿಯಾಗಿ ಬಸವಲಿಂಗಪ್ಪ ಪ್ರತಿಕ್ರಿಯಿಸಿದ್ದಾರೆ;"ಆ ವೇದ, ಗೀತೆ ಇವೆಲ್ಲವುಗಳನ್ನೆಲ್ಲಾ ತೆಗೆದು ಶೈತ್ಯಾಗಾರದಲ್ಲಿ ಹತ್ತು ವರುಷ ಇಡಬೇಕು.ಇವುಗಳನ್ನೆಲ್ಲಾ ಎಷ್ಟು ಗೌರವಿಸಿದರೂ ಸಹ ನಮ್ಮ ದೇಶದ ಬಡತನ ನಿವಾರಣೆ ಆಗಲ್ಲಾ ಇವೆಲ್ಲಾ ಬೂಟಾಟಿಕೆ."ಈ ಹಳೆಯದನ್ನೆಲ್ಲಾ ಕಿತ್ತು ಹಾಕಿ ಹೊಸದನ್ನು ನಿರ್ಮಾಣ ಮಾಡಬೇಕಿದೆ. ನೀವು ಹಳೆಯ ಮನುಷ್ಯರೆಲ್ಲಾ ಮನೆಗೆ ಹೋಗಿ ಹೊಸ ಕ್ರಾಂತಿಗೆ ಸಹಕರಿಸಿ ಎಂದು ಮನವಿ ಮಾಡಿದ್ದಾರೆ.

ಹಿಂದೂ ಧರ್ಮದ ವಕ್ತಾರಿಕೆ ಮಾಡಿ ಸಮಾಜದಲ್ಲಿ ಸಮಾಧಾನ ಗೌರವ, ಸ್ಥಾನವಾನ, ಪಡೆದಿರುವ ಭೂಪಾಳಂ;"ನಮ್ಮ ದೇಶದ ಗುಲಾಮಗಿರಿ ಹೋಗಲು ಅಸ್ಪೃಶ್ಯತೆ ತೊಡೆದು ಹಾಕಲು, ಸ್ವಾತಂತ್ರ್ಯ ಲಭ್ಯವಾಗಲು ವೇಧ,ಉಪನಿಷತ್,ಗೀತೆಗಳು ಸ್ವಾತಂತ್ರ ಶಿಲ್ಪಿಗಳಾದ ಅರವಿಂದ, ತಿಲಕ್, ಗಾಂಧೀಜಿಯವರ ಕೈ ದೀವಿಗೆಯಾಗಿದ್ದವು. ಇವರ ಮಾರ್ಗದರ್ಶನದಿಂದಲೇ ಸ್ವರಾಜ್ಯ ನಮಗೆ ದೊರಿಕಿದೆ. ಇದೇ ಕಾರಣದಿಂದಲೇ ತಮಗೂ ಮಂತ್ರಿ ಪದವಿ ದೊರೆಕಿರುವುದು ಜ್ಞಾಪಕವಿರಲಿ" "ಹೊಸಕ್ರಾಂತಿಗೆ ಧಾರಾಳವಾಗಿ ಸಹಕರಿಸುತ್ತೇವೆ. ದೀನ ದಲಿತರ ಸೇವೆ, ಹರಿಜನ ಸೇವೆಗಳನ್ನು ನನ್ನ ಜೀವನದಲ್ಲಿ ಹಲವಾರು ಬಾರಿ ಮಾಡಿದ್ದೇನೆ. ಅದರಲ್ಲಿ ನಿಮ್ಮ ಜೊತೆಗೂಡಿ ಸಹಕರಿಸಲು ನನಗೆ ಯಾವ ಅಭ್ಯಂತರವೂ

ಇಲ್ಲಾ.ನನಗೆ ಹರಿಜನರ ಮನೆಯಲ್ಲಿ ಊಟ ಮಾಡಿದ ಅಭ್ಯಾಸವಿದೆ. ಅಲ್ಲದೇ ಸಹಪಂಕ್ತಿಯಲ್ಲಿ ಅವರಿಗೆ ಆತಿಥ್ಯ ನೀಡಿದ ಸಂಧರ್ಭ ಬೇಕಾದಷ್ಟಿದೆ.ಆದರೆ ಹಳೆಯದನ್ನೆಲ್ಲಾ ಕಿತ್ತು ಹೊಸದರ ನಿರ್ಮಾಣವೆಂದರೇ ಬೇರುಗಳನ್ನು ಕಿತ್ತು ಮರ ಬೆಳೆಸಲು ಪ್ರಯತ್ನಿಸಿದಂತೆಯೇ ಸರಿ" ಎಂದು ವಾದಿಸಿದ್ದಾರೆ.

ಭಾರತ ದೇಶದ ಗುಲಾಮಗಿರಿ ಮತ್ತು ಅಸ್ಪøಶ್ಯತೆ ತೊಲಗಿಸಿ ಪರಕೀಯರಿಂದ ಸ್ವಾತಂತ್ರ ಲಭಿಸಲು ಹಿಂದೂ ಧರ್ಮಗ್ರಂಥಗಳೇ ಪ್ರೇರಣೆ ಮತ್ತು ಕಾರಣವೆಂದು ವಾದಿಸುವ ಭೂಪಾಳಂ ಪಾಳಯ ಉತ್ಪ್ರೇಕ್ಷೆಯ ಮಾತುಗಳಾಡುತ್ತಾ ; ಇತಿಹಾಸಕಾರರ ಪ್ರಚಲಿತ ಸಂಶೋಧಿತ ಸಾಕ್ಷಿ ಫಲಿತಗಳನ್ನು ಸಾರಾಸಗಟಾಗಿ ಅಲ್ಲಗಳೆದಿದೆ. 'ಧರ್ಮಾಂದತೆ' ತನ್ನನ್ನು ಪ್ರಶ್ನಿಸುವ ಇತರೆ ಆಧಾರಗಳು ನಗಣ್ಯವೆಂದು, ತಾವೇ ಅತೀತರಾದವರು ಎಂದು ಒತ್ತಾಯಿಸುವ ಪಾರಂಪರಿಕ ಪರಿಪಾಠವನ್ನು ಮನುವಾದಿಗಳು ಎಂದಿನಂತೆ ಪರಿಪಾಲಿಸಿದ್ದಾರೆ. ಮನವಾದಿ ಪೂರ್ವಜರಿಂದಾದ ಅನಾಚಾರಗಳನ್ನು ಅರಿತು ಪಶ್ಚಾತ್ತಾಪದಿಂದ ಪರಿವರ್ತಿತರಾಗದೇ, 'ಆಗಿರುವ ಅನರ್ಥಗಳಿಗೆ ನಾವು ಕಾರಣರಲ್ಲಾ'! ಎಂದು ನುಣಿಚಿಕೊಳ್ಳುಲು ಬೇಜವಾಬ್ದಾರಿ ಜಾಣನಡೆ ಭೂಪಾಳಂ ಪರಿವಾರದ್ದು. ಗೀತೆಗಳು ಸ್ವಾತಂತ್ರ ಶಿಲ್ಪಿಗಳ ಕೈ ದೀವಿಗೆಯಾಗಿದ್ದವು ಎಂಬುದರಲ್ಲಿ ಯಾವ ಅನುಮಾನವೂ ನಮಗಿಲ್ಲಾ; ಅಸಮಾನತೆ, ಅರಾಜಕತೆಯನ್ನು ಪೋಷಿಸುವ ಧರ್ಮಗ್ರಂಥಗಳನ್ನು, ಮಹಾತ್ಮರು ಕೈದೀವಿಗೆಯಾಗಿಸಿಕೊಂಡ ಕಾರಣಕ್ಕೆ, ನಿಮ್ನ ವರ್ಗಗಳ ವಿಮೋಚನೆ ಸಾಕಾರವಾಗಲಿಲ್ಲ! ಎಂಬ ಅಂಶವನ್ನು (1930/31/32ರ) ಗಾಂಧೀ ಮತ್ತು ಅಂಬೇಡ್ಕರ್ ನಡುವಿನ ಪೂನಾ ಒಪ್ಪಂದದ ಪ್ರಹಸನಗಳು ಪುಷ್ಟಿ ನೀಡುತ್ತವೆ. ಹರಿಜನ ಸೇವೆ, ಸಹಪಂಕ್ತಿ,ಅಸ್ಪøಶ್ಯರ ಜೊತೆ ಊಟ ಮಾಡಿದ ಕೆಲಸಗಳು ಮಹೋನ್ನತ ಕಾರ್ಯಗಳೆಂದು ಭಾವಿಸಿರುವ ಬೂಟಾಟಿಕೆಯು, ಕ್ಯಾನ್ಸರ್ ರೋಗಕ್ಕೆ ಮುಲಾಮಿನ ಉಪಚಾರ ನೀಡುವ ಧರ್ಮೊದ್ಯಮಿಗಳ ನಡೆಸುವ ಕುಚೋದ್ಯದಂತೆ ಇಲ್ಲಿ ಕಂಡುಬರುತ್ತವೆ.'ಹರಿಜನ' ಎಂಬ ಪದವು ಬಾಬಾ ಸಾಹೇಬರ ಅಲ್ಲಗಳೆದ ಪದವೆಂಬ ಕನಿಷ್ಟ ಪರಿವಿರದ ಮೂಲ ನಿವಾಸಿ ಬಹುಜನರನ್ನು 'ಹರಿಜನ' ಎಂಬ ಅಸಂಬದ್ಧ ಪದ ಬಳಸಿ ಬಿಸವಲಿಂಗಪ್ಪ ಎಂಬ ವಿಚಾರವಾದಿಯನ್ನು ಕೋಪೊದ್ರೇಕಗೊಳಿಸಲು ಯತ್ನಿಸಿದ್ದಾರೆ. 'ನೆಲದ ಸ್ವಾಭಿಮಾನಿ ತಳ ಸಮುದಾಯಗಳಿಗೆ ಅವಮಾನಕರ ಹೆಸರಿಡುವ ಅಧಿಕಾರ ಗಾಂಧೀಜಿಯವರಿಗಾಗಲಿ ಹಿಂದುತ್ವವಾಗಿಗಳಿಗಾಗಲಿ ಇಲ್ಲಾ, ಅದನ್ನು ಸ್ವೀಕರಿಸು ಅಥವಾ ನಿರಾಕರಿಸುವ ಹಕ್ಕು ದಮನಿತರಿಗೆ ಮಾತ್ರವೇ ಇದೆ' ಎಂಬ ಸಂದೇಶವನ್ನು ಶೃಂಗಜರಿಗೆ ಬಿ ||ಬಸವಲಿಂಗಪ್ಪನವರು ನೀಡಿದ್ದಾರೆ.

ಸಾವಿರಾರು ವರುಷಗಳ ಸಾಮಾಜಿಕ ಗುಲಾಮಗಿರಿಯಿಂದ ಬಳಲಿರುವ ಭಾರತದ ಬಹುಸಂಖ್ಯಾತ ಜನರನ್ನು ವಿಮೋಚಿಸುವ ಬಾಬಾ ಸಾಹೇಬ್ ಅಂಬೇಡ್ಕರರ ಹೋರಾಟವು ಸ್ವಾತಂತ್ರ ಹೋರಾಟವಲ್ಲವೆಂಬುದು ಮನುವಾದಿಗಳ ವಾದ. ಅಂಬೇಡ್ಕರರು ಏಕೆ ಹಿಂದೂ ಧರ್ಮವನ್ನು

ತಿರಸ್ಕರಿಸಿದರು? ಎಂದು ಹಸಿದ ಜನಾಂಗಗಳ ಬಳಲಿದ ಕಣ್ಣುಗಳಲ್ಲಿ ಉತ್ತರ ಹುಡುವ ಸತ್ವವಿರುವ ಮನುಷ್ಯ ಮಾತ್ರನಿಗೆ ಕೇಳಿದರೇ ಉತ್ತರ ಸಿಗಬಹದು. ಅಸ್ಪೃಶ್ಯರ ಕನಿಷ್ಟ ಮಾನವ ಹಕ್ಕುಗಳನ್ನು ಕಸಿದುಕೊಂಡು ಅಮಾನವೀಯವಾಗಿ ನಡೆಸಿಕೊಂಡು ಕಿರುಕುಳ ನೀಡುತ್ತಾ, ಮತ್ತೊಂದೆಡೆ, ಪರಕೀಯರಿಂದ ದೇಶದ ಸ್ವಾತಂತ್ರಕ್ಕಾಗಿ ಹೋರಾಡಿದೆವೆನ್ನುವ ಮತೀಯವಾದಿಗಳು 'ಸ್ವಾತಂತ್ರ'ಪದದ ನಿಜ ಅರ್ಥವನ್ನು ಮತ್ತೊಮ್ಮೆ ಪರಿಶೀಲಿಸಬೇಕು. ಅಕ್ಷರ, ಆತ್ಮಗೌರವ, ಅಧಿಕಾರವನ್ನು ಸಂವಿಧಾನದ ಬಲದಿಂದ ಪಡೆದ ಬಸವಲಿಂಗಪ್ಪನವರ ಮಂತ್ರಿ ಪದವಿಯು 'ಧರ್ಮಗ್ರಂಥಗಳ ಫಲ' ಎಂಬ ಹಿಂದುತ್ವವಾದಿಗಳ ಕೃಪಾಕಟಾಕ್ಷದ ಮಾತುಗಳು ಬಸವಲಿಂಗಪ್ಪನವರನ್ನು ಮತ್ತು ನಿಮ್ನ ವರ್ಗಗಳನ್ನು ಬಹಿರಂಗವಾಗಿ ಜರಿಯುವ ಮನುವಾದಿಗಳ ಪ್ರಯತ್ನ ದೊಡ್ಡ ಹಾಸ್ಯವೆನಿಸುತ್ತದೆ.

ರೋಗಿಷ್ಟ ಬೇರನ್ನು ಕತ್ತರಿಸದೇ ಮಂತ್ರಮಾತ್ರದಿಂದ ಉಪಚರಿಸಿ ಚೈತನ್ಯಗೊಳಿಸುವ ನಶೆಯಲ್ಲಿರುವ ಭೂಪಾಳಂ ಪರಿವಾರ, ಅಪ್ಪಾ ಹಾಕಿದ ರೋಗದ ಮರದಲ್ಲೇ ಇದ್ದರೇ, ನೊಂದ ವರ್ಗಗಳಿಗೇನು ತಕರಾರಿಲ್ಲಾ, ನೆಲದ ಮೂಲ ನಿವಾಸಿಗಳಾರೂ ಭೂಪಾಳಂರವರು ಹೇಳುತ್ತಿರುವ ಹಿಂದೂ ಧರ್ಮದ ಪರಿವಾರದವರೂ ಅಲ್ಲಾ, "ಹಿಂದೂ ಧರ್ಮದ ಉದ್ದಾರದ ಜವಾಬ್ದಾರಿಯನ್ನು ದಲಿತರೇಕೆ ಹೊರಬೇಕು?" ಎನ್ನುವ ಅಂಬೇಡ್ಕರ್ವಾದಿ ಚಿಂತನೆಯನ್ನು ಬಸವಲಿಂಗಪ್ಪನವರು ತಮ್ಮ ಭಾಷಣದಲ್ಲಿ ಸಾರುತ್ತಿರಿರುವುದನ್ನು ತಳ ಸಮುದಾಯಗಳು ಗಮನಿಸಬೇಕು.

ಹಿಂದೂಧರ್ಮದ ಸಾರ್ವಭೌಮತ್ವವನ್ನು ಸವರ್ಣೀಯರ ಪದತಳದಲ್ಲಿ ದಲಿತರನ್ನಿರಿಸುವ ದಯನೀಯ ವಿಕೃತಿಯ ದಮನಕಾರಿಯಾಗಿ ಒಪ್ಪಿಸುವ ಉದ್ದಟತನ ಹಿಂದತ್ವವಾದಿಗಳ ವಾದಸರಣಿಯಲ್ಲಿ ವ್ಯಕ್ತವಾಗಿದೆ. ಹಳೆಯ ಕೊಳೆ ಮನಸುಗಳ ಅಧರ್ಮದ ಬೇರಿಗೆ ಅಂತ್ಯಜರ ನೆತ್ತರು ಆಪೋಷಿಸುವ ಬದಲು ಹೊಸ ಕ್ರಾಂತಿಗೆ ಮನುಷ್ಯತ್ವವೆಂಬ ಪರಿವರ್ತನೆಯ ನೀರು ಹರಿಸಿದರೇ, ನಿಜಕ್ಕೂ ಮಹಾಭಾರತ ವಿಶ್ವಗುರು ಎನಿಸಿಕೊಳ್ಳುತ್ತದೆ.

**ಉಪಸಂಹಾರ**

ಹಿಂದೂ ಸವರ್ಣೀಯನೆಂಬ ಬೆಕ್ಕು 'ತನ್ನ ಭೇಟೆ ಇಲಿಯು ತಪ್ಪಿಸಿಕೊಂಡು ತನ್ನನು ವಂಚಿಸುತ್ತಿದೆ' ಎಂಬ ನಿರ್ಧಾರಕ್ಕೆ ಬಂದರೇ, ಬೆಕ್ಕಿನಿಂದ ತನ್ನ ಪ್ರಾಣವೆಂಬ ಅಸ್ತಿತ್ವದ ಉಳಿವಿಗಾಗಿ ಹೋರಾಟ ನಡೆಸುತ್ತಿರುವ ಇಲಿಯ ಪಾಡು ಈ ನೆಲದ ನಿಮ್ನ ವರ್ಗಗಳದ್ದು. ವಂಚಿತರ ಹೋರಾಟದ ಪ್ರತಿರೋದಕ್ಕೆ ಮೊಂಡುವಾದವ ಮುಂದಿರಿಸಿ ಅಲ್ಲಗಳೆಯುವ ತಂತ್ರಗಾರಿಕೆಯನ್ನು ಮನುವಾದಿಗಳು ಚರಿತ್ರೆಯುದ್ದಕ್ಕೂ ಹೆಣೆಯುತ್ತಾ ಬಂದಿದ್ದಾರೆ. ಬುದ್ದ, ಬಸವ, ಅಂಬೇಡ್ಕರರ ಚಿಂತನೆಗಳು

ಉಂಟುಮಾಡಿರುವ ಸಾಮಾಜಿಕ ಕ್ರಾಂತಿಯನ್ನು ಸಹಿಸದಿರುವ ಧರ್ಮಾಂಧರು ; ಪೊಳ್ಳು ಪುರಾಣಗಳು, ಸುಳ್ಳಿನ ಶಾಸ್ತ್ರಗಳನ್ನು ಸರ್ವಕಾಲಿಕ ಸತ್ಯವಾಗಿಸಲು ಹವಣಿಸುತ್ತಿದ್ದಾರೆ. ಹೊಸತನವನ್ನು ಪೋಷಿಸದೆ ಮುದಿ ಸಿದ್ಧಾಂತ ಹೇರುವಿಕೆಯ ಇವರ ನಡೆ ಭವ್ಯ ಭಾರತದ ಭವಿಷ್ಯಕ್ಕೆ ಹಾಕಿದ ತಡೆಗೋಡೆಯಂತೆ ಕಾಣುತ್ತಿವೆ.

ವಿಚಾರವಾದಿ ಬಸವಲಿಂಗಪ್ಪ ಮತ್ತು ಹಿಂದುತ್ವವಾದಿ ಭೂಪಾಳಂ ಪಾಳಯದ ನಡುವೆ ನಡೆದ ವಿಚಾರ ಸರಣಿಯು ತತ್ವಜ್ಞಾನಿಯೊರ್ವ ಮತ್ತು ಧರ್ಮಶಾಸ್ತ್ರ ಪಂಡಿತನ ವಾಗ್ವಾದವನ್ನು ನೆನಪಿಸುತ್ತಿದೆ. ಧರ್ಮ ಪಂಡಿತ ತತ್ವ ಜ್ಞಾನಿ ಕುರಿತು ಹೀಗೆ ಹೇಳುತ್ತಾನೆ."ತತ್ವಜ್ಞಾನಿಯು ಕತ್ತಲ ಕೋಣೆಯಲ್ಲಿ ಇಲ್ಲದ ಕರಿ ಬೆಕ್ಕಿಗಾಗಿ ಹುಡುಕುವ ಕುರುಡನಿದ್ದಂತೆ" ಎಂದರೇ? ತತ್ವಜ್ಞಾನಿ ಧರ್ಮಪಂಡಿತನ ಕುರಿತು "ಧರ್ಮ ಪಂಡಿತನು ಕತ್ತಲ ಕೋಣೆಯಲ್ಲಿ ಇಲ್ಲದ ಬೆಕ್ಕಿಗಾಗಿ ಹುಡುಕುವ ಕುರುಡನಂತಿದ್ದೂ, ಅದನ್ನು ತಾನು ಕಂಡಿರುವುದಾಗಿ ಆಣೆಯಿಟ್ಟು ಹೇಳುತ್ತಿದ್ದಾನೆ"ಎನ್ನುತ್ತಾನೆ.

ತತ್ವಜ್ಞಾನಿ ಮತ್ತು ಧರ್ಮಪಂಡಿತನ ಕತೆಯನ್ನು ಬಸವಲಿಂಗಪ್ಪ ಮತ್ತು ಭೂಪಾಳಂ ವಾದ ಸರಣಿಗೆ ಹೋಲಿಸಿದರೇ. ನೊಂದ ಜನ ವರ್ಗಗಳಿಗಾದ ಚಾರಿತ್ರಿಕ ಹಿಂಸೆಯನ್ನು ಮುಂದಿಟ್ಟು ನ್ಯಾಯ ಕೇಳುತ್ತಿರುವ ಬಸವಲಿಂಗಪ್ಪ ಇಲ್ಲಿ ತತ್ವಜ್ಞಾನಿಯಂತೆ ಕಂಡರೇ, ಭೂಪಾಳಂರವರ ಪರಂಪರೆ ಧರ್ಮಪಂಡಿತನ ಆಗೆ ಕಾಣುತ್ತಾರೆ. "ಭಾರತ ದೇಶದ ನೈಜ ಚರಿತ್ರೆಯನ್ನು ಪೊಳ್ಳು ಪುರಾಣದ ಪ್ರಚಾರದಿಂದ ನಾಶಪಡಿಸಲು ಯಾರಿಂದಲೂ ಸಾಧ್ಯವಿಲ್ಲ"ಎಂದ ಬಾಬಾ ಸಾಹೇಬರ ಚಿಂತನೆಗಳ ರಾಯಭಾರಿಯಾದ ಬಿ ||ಬಸವಲಿಂಗಪ್ಪನವರ ವಾದಸರಣಿ ನ್ಯಾಯನಿಷ್ಟವೆಂದು ಹೆಮ್ಮೆಯಿಂದ ಘೋಷಿಸಬಹುದು.

"ಹಿಂದೂವಾಗಿ ಹುಟ್ಟಿದ್ದೇನೆ ಹಿಂದೂವಾಗಿ ಸಾಯುವುದಿಲ್ಲಾ" ಎಂಬ ಡಾ.ಅಂಬೇಡ್ಕರರ ಮಾತಿಗೆ ಕಂಕಣಬದ್ದರಾಗಿರುವ ಬಸವಲಿಂಗಪ್ಪನವರು ಹಿಂದುತ್ವದ ವಿಷ ಜಾಲದಿಂದ ಜನಾಂಗಗಳನ್ನು ವಿಮೋಚಿಸಿ ಬುದ್ದತ್ವವೆಂಬ ಮನ್ವಂತರದೆಡೆಗೆ ಮುನ್ನಡೆಸಿದ್ದಾರೆ. ಸಮಬಾಳಿನ ಮಹತ್ವ ಸಾರಿ ಜೀವಪರ ಕಾಳಜಿ ಮೆರುದಿರುವ ಬಿ.ಬಸವಲಿಂಗಪ್ಪನವರ ಅಂಬೇಡ್ಕರ್ವಾದವೋ ಅಥವಾ ಸನಾತನವಾದುವೆಲ್ಲಾ ಪ್ರಶ್ನಾತೀತವಾದುವೆಂದು ಶೋಷಣೆಯ ಆತೋರೆಯುವ ಹಿಂದುತ್ವವಾದಿ ಭೂಪಾಳಂರವರ ವಾದವೊ!. ಯಾರ ವಿಚಾರಧಾರೆಗಳು ಸಂವಿಧಾನ ಸಮ್ಮತ ಆಶಯಗಳಿಗೆ ಪೂರಕವಾದ ಚಿಂತನೆಗಳನ್ನು ಸೂಚಿಸುತ್ತವೆ ಅವುಗಳನ್ನು ಒಪ್ಪಿ ಸಾಮಾಜಿಕ ಬದಲಾವಣೆಗೆ ಸಮಾಜ ಅಣಿಯಾಗಬೇಕಿದೆ.

## ಪರಾಮರ್ಶನ ಗ್ರಂಥಗಳು

1).ಉದಯವಾಣಿ ದಿನ ಪತ್ರಿಕೆ ; ದಿನಾಂಕ/22/10/1973ರಲ್ಲಿ ಪ್ರಕಟಿತ ವರದಿ.

2).ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಬರಹ ಮತ್ತು ಭಾಷಣ ಸಂಪುಟ ; ಕನ್ನಡ ಮತ್ತು ಸಂಸ್ಕೃತಿ ಇಲಾಖೆ ,ಕುವೆಂಪು ಭಾಷಾ ಭಾರತಿ, ಮಲ್ಲತ್ತಹಳ್ಳಿ ಬೆಂಗಳೂರು.

3)ಧೀಮಂತ ಬಿ ಬಸವಲಿಂಗಪ್ಪ ಸ್ಮರಣೆ ಸಂಚಿಕೆ.

4)ಕುಮಾರ ಕಕ್ಕಯ್ಯ ಪೋಳ;ಚಾತುವರ್ಣ ಧರ್ಮ ದರ್ಶನ; ಹಿಂಬರದ ಹೇಳಿಕೆ. ಲಡಾಯಿ ಪ್ರಕಾಶನ

5) ದಿ ಹಿಂದೂ ದಿನ ಪತ್ರಿಕೆ. ಜನವರಿ/ 27/2009/ ನವದೆಹಲಿ.

6)ಡಾ ಚಂದ್ರ ಪೂಜಾರಿ;ಸಂಶೋಧನೆ ಏನು? ಏಕೆ? ಹೇಗೆ?; ಪ್ರಸಾರಾಂಗ,ಕನ್ನಡ ವಿಶ್ವವಿದ್ಯಾಲಯ,ಹಂಪಿ.

7)ರಾಷ್ಟ್ರೀಯ ಅಪರಾದ ವರದಿಯ ಅಂಕಿ ಅಂಶಗಳು. Increase in Atrocities on Dalits 2019-21 (%) India and some states